ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ



# ಸ್ವಚ್ಛತೆಯೇ ಸೇವೆ ಅಭಿಯಾನದಡಿ 12 ಐತಿಹಾಸಿಕ ಕಲ್ಯಾಣಿಗಳ ಪುನಶ್ಚೇತನ ಕಾರ್ಯ

## ರಾಜ್ಯಕ್ಕೆ ಮಾದರಿಯಾದ ತುಮಕೂರು ಜಿಲ್ಲೆ

ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ಒಂದಾದ ನೀರು ಅತ್ಯಮೂಲ್ಯ ಸಂಪತ್ತಾಗಿದೆ. ಬದಲಾದ ಕಾಲಘಟ್ಟದಲ್ಲಿ ಆಧುನೀಕರಣ, ನಗರೀಕರಣ, ಕಾಡುನಾಶದಿಂದಾಗಿ ಮಳೆಯ ಪ್ರಮಾಣವೂ ಕಡಿಮೆಯಾಗಿದ್ದು, ತಾಪಮಾನ ಏರಿಕೆಯಾಗಿದ್ದು, ಬರಗಾಲ, ಹವಾಮಾನ ವೈಪರಿತ್ಯದ ಕಾರಣದಿಂದಾಗಿ ಅಂತರ್ಜಲ ಮಟ್ಟ ಕುಸಿದಿದ್ದು ನೀರಿಗೆ ಬರಬಂದಿದೆ. ವರ್ಷದಿಂದ ವರ್ಷಕ್ಕೆ ನೀರಿನ ಕೊರತೆ ಹೆಚ್ಚಾಗುತ್ತಿದೆ. ಇಂತಹ ಸನ್ನಿವೇಶದಲ್ಲಿ ನೀರನ್ನು ಉಳಿಸಲು ನೀರಿನ ಮಿತಬಳಕೆ, ಮರುಬಳಕೆ, ಜಲಮೂಲಗಳ ಪುನಶ್ಚೇತನ ವಿಧಾನಗಳನ್ನು ಬಳಸುವುದು ಮುಖ್ಯವಾಗಿದೆ.

ಹಿಂದಿನ ಕಾಲದಲ್ಲಿ ಹಳ್ಳಿಗರ ನೀರಿನ ಆಧಾರವಾಗಿದ್ದ ಕಲ್ಯಾಣಿಗಳು, ಕೆರೆಗಳು ಕಾಲಕ್ರಮೇಣ ನಿರ್ಲಕ್ಷ್ಯಕ್ಕೆ ಒಳಪಟ್ಟು ಮುಚ್ಚಿ ಹೋಗಿವೆ, ಕಸ ಹಾಕುವ ಸ್ಥಳಗಳಾಗಿ ಮಾರ್ಪಟ್ಟಿವೆ. ಇನ್ನಷ್ಟು ಹೂಳು ತುಂಬಿ ಮುಚ್ಚಿ ಹೋಗಿವೆ. ಈ ನಿಟ್ಟಿನಲ್ಲಿ ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ), ನರೇಗಾದಂತಹ ಯೋಜನೆಗಳ ಮೂಲಕ ಸರ್ಕಾರವು ಪುರಾತನ ಕಲ್ಯಾಣಿಗಳ ಪುನಶ್ಚೇತನ ಮಾಡಿಸುತ್ತಿದೆ. ಇದೇ ಹಾದಿಯಲ್ಲಿ ಈ ಬಾರಿಯ ಸ್ವಚ್ಛತೆಯೇ ಸೇವೆ ಪಾಕ್ಷಿಕ-2024 ಆಂದೋಲನದ ಭಾಗವಾಗಿ ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ)ದ ಅಡಿಯಲ್ಲಿ ತುಮಕೂರು ಜಿಲ್ಲೆಯಲ್ಲಿ ಸುಮಾರು 12 ಕಲ್ಯಾಣಿಗಳ ಪುನಶ್ಚೇತನ ಕಾರ್ಯ ನಡೆದಿದ್ದು ಗಮನಾರ್ಹವಾಗಿದೆ.

ಕಲ್ಯಾಣಿಗಳು ಕೇವಲ ಜಲಮೂಲವಾಗಿರದೆ, ಮುಖ್ಯವಾಗಿ ದೇವತಾ ಕಾರ್ಯಗಳಿಗೆ ಈ ನೀರು ಬಳಕೆಯಾಗುವ ಮೂಲಕ ಆಧ್ಯಾತ್ಮಕ ಸಂಬಂಧವನ್ನು ಹೊಂದಿದೆ. ಇಂತಹ ಐತಿಹಾಸಿಕ, ಪಾರಂಪರಿಕ ಹಿನ್ನೆಲೆಯಿರುವ ಕಲ್ಯಾಣಿಗಳನ್ನು ಉಳಿಸಬೇಕಾದದ್ದು ನಮ್ಮೆಲ್ಲರ ಹೊಣೆ. ಈ ಹಿನ್ನೆಲೆಯಲ್ಲಿ ತುಮಕೂರು ಜಿಲ್ಲೆಯಲ್ಲಿ ಸ್ವಚ್ಛತೆಯೆ ಸೇವೆ ಅಭಿಯಾನದಡಿ ಅಧಿಕಾರಿಗಳು, ಸ್ವಚ್ಛತಾ ಕಾರ್ಮಿಕರು ಮತ್ತು ಸ್ವಚ್ಛಾಗ್ರಾಹಿಗಳು ಕಲ್ಯಾಣಿಗಳ ಪುನಶ್ಚೇತನ ಕಾರ್ಯಕ್ಕಾಗಿ ಒಟ್ಟಾದರು. ಕಲ್ಯಾಣಿಗಳ ಸುತ್ತಲು ಬೆಳೆದ ಗಿಡಗಂಟಿ, ಕಳೆಗಿಡಗಳನ್ನು ಕೀಳುವುದು, ಕಲ್ಯಾಣಿಯ ನೀರಿಗೆ ಬಿದ್ದ ಕಸವನ್ನು ತೆಗೆಯುವುದು, ಪಾಳುಬಿದ್ದ ಕಲ್ಯಾಣಿಯ ಒಳಗಿದ್ದ ಮಣ್ಣು ಕಸವನ್ನು ಸ್ವಚ್ಛಗೊಳಿಸುವ ಮೂಳಕ ಕಲ್ಯಾಣಿಗಳ ಪುನರುಜ್ಜೀವನದಲ್ಲಿ ತಮ್ಮನ್ನು ತೊಡಗಿಸಿಕೊಂಡರು.

## 236 ಜನರ ಸಹಭಾಗಿತ್ವದಲ್ಲಿ 12 ಕಲ್ಯಾಣಿಗಳ ಪುನಶ್ಚೇತನ ಕಾರ್ಯ

ತುಮಕೂರು ಜಿಲ್ಲೆಯಲ್ಲಿ ನಡೆದ 12 ಕಲ್ಯಾಣಿಗಳ ಪುನಶ್ಚೇತನ ಕಾರ್ಯವು 2024ರ ಸ್ವಚ್ಛತೆಯೇ ಸೇವೆ ಅಭಿಯಾನದ ಮಹತ್ವದ ಭಾಗವಾಗಿದೆ. ಕಲ್ಯಾಣಿಗಳ ಉಳಿವಿನ ಅಗತ್ಯತೆಯನ್ನು ಜನರಿಗೆ ತಿಳಿಸುವಲ್ಲಿ, ಜನರಲ್ಲಿ ನೈರ್ಮಲ್ಯದ ಜಾಗೃತಿ ಮೂಡಿಸುವಲ್ಲಿ, ಸಾರ್ವಜನಿಕ ಆಸ್ತಿಗಳ ಉಳಿವಿನಲ್ಲಿ ಸಮುದಾಯದ ಸಹಭಾಗಿತ್ವವನ್ನು ತಿಳಿಸುವಲ್ಲಿ ಈ ಅಭಿಯಾನ ಫಲಪ್ರದವಾಗಿದೆ. ವಿದ್ಯಾರ್ಥಿಗಳು, ಸ್ಥಳೀಯ ನಿವಾಸಿಗಳು, ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು, ತಾ.ಪಂ, ಗ್ರಾ.ಪಂ ಸಿಬ್ಬಂದಿ, ಸ್ವಚ್ಛತಾ ಕಾರ್ಮಿಕರನ್ನು ಒಳಗೊಂಡ ಸುಮಾರು 236 ಜನರ ತಂಡ ಕೈ ಜೋಡಿಸಿ 12 ಕಲ್ಯಾಣಿಗಳನ್ನು ಪುನಶ್ಚೇತನಗೊಳಿಸಿದ್ದಾರೆ.

## ಪುನಶ್ಚೇತನಗೊಂಡ ಕಲ್ಯಾಣಿಗಳ ಪಟ್ಟಿ ಹೀಗಿದೆ:

1. **ತುರುವೇಕೆರೆ** ತಾಲ್ಲೂಕಿನ ಕಣತ್ತೂರು ಗ್ರಾಮದ ದೊಡ್ಡಮ್ಮ ದೇವಸ್ಥಾನ ಮುಂಭಾಗದ ಪುರಾತನ ಕಲ್ಯಾಣಿ
2. **ಕುಣಿಗಲ್** ತಾಲ್ಲೂಕಿನ ಸಂತೆ ಮಾವತ್ತೂರು ಗ್ರಾ.ಪಂ ವ್ಯಾಪ್ತಿಯ ಬಸವೇಶ್ವರ ಸ್ವಾಮಿ ದೇವಸ್ಥಾನದ ಕಲ್ಯಾಣಿ
3. **ಶಿರಾ** ತಾಲ್ಲೂಕಿನ ಸೀಬಿ ಅಗ್ರಹಾರ ಗ್ರಾ.ಪಂ ವ್ಯಾಪ್ತಿಯ ಸೀಬಿ ಅಗ್ರಹಾರದಮ್ಮನವರ ದೇವಸ್ಥಾನದ ಕಲ್ಯಾಣಿ
4. **ಪಾವಗಡ** ತಾಲ್ಲೂಕಿನ ನಿಡಗಲ್ಲು ಗ್ರಾಮದ ಶ್ರೀರಾಮ ನಾಮದ ಚಿಲ್ಮೆಯ ನಾಮ ತೀರ್ಥ ಕಲ್ಯಾಣಿ
5. **ಚಿಕ್ಕನಾಯಕನಹಳ್ಳಿ** ತಾಲ್ಲೂಕಿನ ಯಳನಾಡು ಗ್ರಾಮದ ಕಲ್ಯಾಣಿ
6. **ಶಿರಾ** ತಾಲ್ಲೂಕಿನ ಬರಗೂರು ಗ್ರಾಮದ ಕಲ್ಯಾಣಿ
7. **ತಿಪಟೂರು** ತಾಲ್ಲೂಕಿನ ಸಾರ್ಥವಳ್ಳಿ ಕಲ್ಯಾಣಿ
8. **ಕೊರಟಗೆರೆ** ತಾಲ್ಲೂಕಿನ ಹೊಲತಾಳು ಗ್ರಾಮದ ಕಲ್ಯಾಣಿ
9. **ಗುಬ್ಬಿ** ತಾಲ್ಲೂಕಿನ ಪೆದ್ದನಹಳ್ಳಿ ಗ್ರಾ.ಪಂ ವ್ಯಾಪ್ತಿಯ ಕಲ್ಯಾಣಿ
10. **ಕೊರಟಗೆರೆ** ತಾಲ್ಲೂಕಿನ ವಡ್ಡಗೆರೆ ಗ್ರಾ.ಪಂ ವ್ಯಾಪ್ತಿಯ ವೀರನಾಗಮ್ಮ ದೇವಸ್ಥಾನ ಕಲ್ಯಾಣಿ
11. **ತುಮಕೂರು** ತಾಲ್ಲೂಕಿನ ದೇವರರಾಯನದುರ್ಗ ಗ್ರಾಮದ ಕಲ್ಯಾಣಿ
12. **ಗುಬ್ಬಿ** ತಾಲ್ಲೂಕಿನ ಎಂ.ಎನ್. ಕೋಟೆ ಗ್ರಾ.ಪಂ ವ್ಯಾಪ್ತಿಯ ಕಲ್ಯಾಣಿ

**ಮುಂದಿನ ಪೀಳಿಗೆಯ ಸುಸ್ಥಿರ ಭವಿಷ್ಯಕ್ಕಾಗಿ ಅಗತ್ಯವಾಗಿ ಬೇಕಾದ ನೀರನ್ನುಳಿಸುವ ಕಾರ್ಯದಲ್ಲಿ ಕಲ್ಯಾಣಿಗಳ ಪುನಶ್ಚೇತನ ಕಾರ್ಯ ಮಹತ್ವದ್ದಾಗಿದ್ದು , ಈ ನಿಟ್ಟಿನಲ್ಲಿ ತುಮಕೂರು ಜಿಲ್ಲೆಯಲ್ಲಿ ಸ್ವಚ್ಛತೆಯೇ ಸೇವೆ ಆಂದೋಲನದ ಭಾಗವಾಗಿ ಕೈಗೊಂಡ ಐತಿಹಾಸಿಕ ಕಲ್ಯಾಣಿಗಳ ಸ್ವಚ್ಛತಾ ಕಾರ್ಯ ಮಾದರಿಯಾಗಿದೆ.**

ಜಲೋತ್ಸವ  ಸ್ವಚ್ಛ ಸಂಕೀರ್ಣ

8277506000
ಏಕೀಕೃತ ಸಹಾಯವಾಣಿ